

# ಕಣ್ಣೀರ್.. ಕಣ್ಣೀರ್!

ಪತ್ರಕರ್ತರೂ ಎಷ್ಟೊಂದು 'ಸ್ಟಾರ್ ಚಮಚಾಗಿರಿ' ಮಾಡುತ್ತಾರೆನ್ನುವುದು ಕಳೆದ ವಾರ ಪತ್ರಿಕಾ ಗೋಷ್ಠಿಯೊಂದರಲ್ಲೇ ಬಯಲಾಯಿತು. ಪತ್ರಕರ್ತರ ಕುಚೋದ್ಯಕ್ಕೆ ಬಲಿಯಾಗಿ ನಟಿ ಕತ್ರೀನಾ ಕೈಫ್ ಕಣ್ಣೀರಿಟ್ಟದ್ದೂ ನಡೆಯಿತು!

ಕತ್ರೀನಾ ಬಾಲಿವುಡ್‌ನ ನಟಿ ಮಾತ್ರವಲ್ಲ, ಜನಪ್ರಿಯ ಮಾಡೆಲ್ ಕೂಡಾ ಹೌದು. ಕಳೆದ ವಾರ ಮುಂಬೈಯಲ್ಲಿ ಉತ್ಪನ್ನವೊಂದರ ಪ್ರಚಾರಕ್ಕೆ ಏರ್ಪಾಡಾದ ಪತ್ರಿಕಾಗೋಷ್ಠಿಯಲ್ಲಿ ಕತ್ರೀನಾ ಮಾತನಾಡುತ್ತಿದ್ದಳು. ಪತ್ರಕರ್ತರು ಉತ್ಪನ್ನದ ಬಗ್ಗೆ ಪ್ರಶ್ನೆಗಳನ್ನು ಕೇಳುವುದು ಬಿಟ್ಟು ಏಕಾಏಕಿ ಕತ್ರೀನಾಳ ವೈಯಕ್ತಿಕ ಜೀವನದ ಬಗ್ಗೆ ಪ್ರಶ್ನೆಗಳ ಸಮೇತ ಮುಗಿಬಿದ್ದರು. ಎಲ್ಲರದ್ದೂ ಒಂದೇ ಪ್ರಶ್ನೆ– 'ನಿಮ್ಮ ಸಂಬಂಧ ಮುಗೀತು ಅಂತ ಸಲ್ಮಾನ್ ಖಾನ್ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾನಲ್ಲ.. ಏನಂತೀರಿ?'

ಆರಂಭದಲ್ಲಿ ಕತ್ರೀನಾ ನಗುನಗುತ್ತಲೇ ಉತ್ತರ ನೀಡಿದಳು. 'ನಾನು ಹಿಂದೆಯೂ ನಮ್ಮ ಸಂಬಂಧದ ಬಗ್ಗೆ ಮಾತನಾಡಿಲ್ಲ. ಈಗಲೂ ಮಾತನಾಡುವುದಿಲ್ಲ' ಎಂದಳು. ಆದರೆ ಪತ್ರಕರ್ತರು ಪಟ್ಟುಬಿಡದೆ ಒಂದೊಂದಾಗಿ ವೈಯಕ್ತಿಕ ಜೀವನಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನೇ ಒಗೆದರು. ಬಹುತೇಕ ಪತ್ರಕರ್ತರು ಸಲ್ಮಾನನ ಏಜೆಂಟರಂತೆ ಮುಗಿಬಿದ್ದರಂತೆ. ಒಂದು ಹಂತದಲ್ಲಿ ರೋಸಿಹೋದ ಕತ್ರೀನಾ, ಕಣ್ಣೀರಿಡುತ್ತಾ ಸಭಾತ್ಯಾಗ ಮಾಡಿದಳು!

ಇದೀಗ ಕತ್ರೀನಾ ತನ್ನ ಎಲ್ಲ ಜಾಹೀರಾತು ಕಂಪೆನಿಗಳಿಗೆ ಸೂಚನೆಯೊಂದನ್ನು ಕಳುಹಿಸಿದ್ದಾಳಂತೆ. ಜಾಹೀರಾತು ಒಪ್ಪಂದದಲ್ಲಿ 'ಪತ್ರಿಕಾಗೋಷ್ಠಿ ಇದ್ದರೆ ಉತ್ಪನ್ನಗಳಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಮಾತ್ರ ಉತ್ತರಿಸುವುದು' ಎನ್ನುವ ಷರತ್ತನ್ನು ಸೇರಿಸಬೇಕು ಎನ್ನುವುದು ಆಕೆಯ ಸೂಚನೆಯಂತೆ.

# ಅಡುಗೆ ನಟಿಯರು!

ಒಂದು ಕಾಲದಲ್ಲಿ ಬೆಳ್ಳಿತೆರೆಯಲ್ಲಿ ವಿಜೃಂಭಿಸಿದ ಬಳಿಕ ಮದುವೆಯಾಗಿ ಗಂಡನ ಮನೆ ಸೇರಿದ ತಾರೆಯರು ಏನು ಮಾಡುತ್ತಿದ್ದಾರೆ... ಎನ್ನುವುದು ಕುತೂಹಲಕರ ಪ್ರಶ್ನೆಯೇ. ಮನೆಯಲ್ಲಿ ಕುಳಿತರೂ ಅವರ ಮನಸ್ಸು ಸಾರ್ವಜನಿಕ ಜೀವನದತ್ತ ಸೆಳೆಯುತ್ತಲೇ ಇರುತ್ತದೆ ಎನ್ನುವುದಂತೂ ನಿಜ.

ಒಂದು ಕಾಲ ಸೂಪರ್ ಸ್ಟಾರಿಣಿಯರಾದ ಕರಿಷ್ಮಾ ಕಪೂರ್ ಮತ್ತು ರವೀನಾ ಟಂಡನ್ ಈಗ ಮತ್ತೆ ವೀಕ್ಷಕರ ಮುಂದೆ ಕಾಣಿಸಿಕೊಳ್ಳುತ್ತಿದ್ದಾರೆ. 'ಮತ್ತೆ ಸಿನಿಮಾದಲ್ಲಿ ಪಾತ್ರ ಸಿಗದಿದ್ದರೇನು.. ಕಿರುತೆರೆ ಇದೆಯಲ್ಲ..' ಎನ್ನುವುದು ಅವರ ಉತ್ತರ. ಕಲರ್ಸ್ ಟಿ.ವಿ ನಡೆಸುತ್ತಿರುವ ಅಡುಗೆ ಷೋ 'ಕಿಚನ್ ಚಾಂಪಿಯನ್–3'ಯಲ್ಲಿ ವಿಶೇಷ ಆ್ಯಂಕರ್‌ಗಳಾಗಿ ಕರಿಷ್ಮಾ ಮತ್ತು ರವೀನಾ ಬಂದಿದ್ದಾರೆ! ಷೋನಲ್ಲಿ ಅವರು ವಿಶೇಷ ಅಡುಗೆಯನ್ನೂ ಮಾಡಲಿದ್ದಾರಂತೆ!





# ಬ್ರಿಟ್ನೀಗೆ ಮತ್ತೆ ಮದುವೆ

ಹಾಲಿವುಡ್‌ನಲ್ಲಿ ಹಂಗಾಮ ಎಬ್ಬಿಸಿರುವ ಪಾಪ್ ತಾರೆ ಬ್ರಿಟ್ನೀ ಸ್ಪಿಯರ್ಸ್ ಮತ್ತೆ ಮದುವೆಯಾಗಲಿದ್ದಾಳಂತೆ. ಈವರೆಗೆ ಬಾಯ್‌ಫ್ರೆಂಡ್ ಆಗಿದ್ದ, ಇದಕ್ಕೂ ಮೊದಲು ತನ್ನ ಏಜೆಂಟ್ ಆಗಿದ್ದ 38ರ ಹರೆಯದ ಜಾಸನ್ ಟ್ರಾನಿಕ್‌ನನ್ನು ಬ್ರಿಟ್ನೀ ವರ್ಷದ ಕೊನೆಗೆ ಮದುವೆ ಆಗಲಿದ್ದಾಳಂತೆ.

ಅಂದ ಹಾಗೆ ಇದು ಬ್ರಿಟ್ನೀಯ ಮೂರನೇ ಮದುವೆ. 2004ರಲ್ಲಿ ಬ್ರಿಟ್ನೀ ಜಾಸನ್ ಅಲೆಕ್ಸಾಂಡರ್ ಎಂಬಾತನನ್ನು ಮದುವೆಯಾಗಿ ಐವತ್ತೈದೇ ಗಂಟೆಗಳಲ್ಲಿ ಡೈವೋರ್ಸ್ ಕೊಟ್ಟು ದಾಖಲೆ ನಿರ್ಮಿಸಿದ್ದಳು. ಆ ಬಳಿಕ ಡ್ಯಾನ್ಸರ್ ಕೆವಿನ್ ಫೆಡರ್‌ಲೈನ್‌ನನ್ನು ಮದುವೆ ಆಗಿ ಎರಡು ಮಕ್ಕಳಾದ ಬಳಿಕ ಅವನನ್ನೂ ತ್ಯಜಿಸಿದ್ದಳು. 'ಸುಲಗ್ನಾ ಸಾವಧಾನ..' ಅನ್ನುವಂತಿಲ್ಲ..!

■ ಬಿಂದು